# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ
# ಹಿರೇಕೆರೂರು

ಸಿ.ಸಿ. ನಂಃ 82/2020

**ಡಿ.ಡಬ್ಲ್ಯೂಃ 1**

ಸಾಕ್ಷಿದಾರರ ಹೆಸರುಃ - ಹೇಮಂತ
ತಂದೆ ಹೆಸರು - ವಸಂತರಾವ್ ಮೋಟೆಬೆನ್ನೂರು
ವಯಸ್ಸುಃ - 40 ವರ್ಷ
ಉದ್ಯೋಗ - ವ್ಯಾಪಾರ
ವಾಸಸ್ಥಳ - ರಟ್ಟೀಹಳ್ಳಿ

ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಯಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಆರೋಪಿ ಪರ ಶ್ರೀ ಆರ್. ವಿ. ಆರ್. ವಕೀಲರಿಂದಃ**

ನಾನು ಹಾಗೂ ಪಿರ್ಯಾದಿದಾರ ಹರಿಹರದ SJVP ಕಾಲೇಜನಲ್ಲಿ BBM ಓದುತ್ತಿದ್ದಾಗ ಪರಿಚಯವಾಗಿರುತ್ತೇವೆ. ಅವರು ಸುತ್ತಕೋಟಿ ಗ್ರಾಮದವರಾಗಿರುತ್ತಾರೆ. ಒಂದೇ ತಾಲೂಕಿನವರು ಆಗಿದ್ದರಿಂದ ಆತ್ಮೀಯತೆ ಬೆಳೆಯಿತು. ನಮ್ಮ ಊರಿಗೆ ಆಗಾಗ್ಗೆ ಬರುತ್ತಿದ್ದ ಓದು ಮುಗಿದ ನಂತರ ತನ್ನ ವ್ಯವಹಾರವನ್ನು ಆಗಾಗ್ಗೆ ನೋಡಿಕೊಳ್ಳುತ್ತಿದ್ದ. ಪಿರ್ಯಾದಿದಾರನು MBA ಓದಲು ಬೆಂಗಳೂರಿಗೆ ಹೋದನು. ನಾನು ನನ್ನ ತಂದೆ ವ್ಯವಹಾರವನ್ನು ನೋಡಿಕೊಳ್ಳಲು MBA ಓದಲಿಲ್ಲ. ನಾನೇ ಸ್ವಂತವಾಗಿ ರೇಣುಕಾ ಟ್ರೇಡರ್ಸನ್ನು ಪ್ರಾರಂಭಿಸಿದೆ, ಜೊತೆಗೆ ನನ್ನ ತಂದೆ ನಡೆಸುತ್ತಿದ್ದ ರೇಣುಕಾ ಸಿಮೆಂಟ್ಸ ಹಾಗೂ ರೇಣುಕಾ ಜನರಲ್ ಸ್ಟೋರ್ಸ, ಅಡುಗೆ ಎಣ್ಣೆ ಏಜೆನ್ಸಿ, ಪಾರ್ಲೆ-ಜಿ ಏಜೆನ್ಸಿ ನೋಡಿಕೊಳ್ಳುತ್ತಿದ್ದೆ. ಇದರೊಂದಿಗೆ 3 ಎಕರೆ ಅಡಿಕೆ ತೋಟ, ಡೈರಿ ಪಾರ್ಮ ಹೊಂದಿರುತ್ತೇನೆ. ಅಷ್ಟೆ ಅಲ್ಲದೇ ಗುತ್ತಿಗೆದಾರನಾಗಿ ಕೆಲಸ ಮಾಡುತ್ತೇನೆ.

2. ಪಿರ್ಯಾದಿದಾರನು ಬೆಂಗಳೂರಿನಿಂದ ಊರಿಗೆ ಬಂದಾಗ ನಮ್ಮ ಮನೆಗೆ ಹಾಗೂ ಮಳಿಗೆಗಳ ಬಳಿ ಬರುತ್ತಿದ್ದನು. MBA ಮುಗಿಸಿ ಕೆಲಸಕ್ಕೆ ಹೋಗುವಾಗಲು ಒಡನಾಟ ಚೆನ್ನಾಗಿದ್ದು, ಅವರ ವೇತನ ಕಡಿಮೆ ಇದ್ದು, ನನ್ನ ವ್ಯವಹಾರ ಚೆನ್ನಾಗಿ ಇರುವುದರಿಂದ ಒಟ್ಟಾಗಿ ಏನಾದರೂ ವ್ಯವಹಾರ ಮಾಡೋಣ ಎಂದು ನನಗೆ ತಿಳಿಸುತ್ತಿದ್ದ. Infosis ನಲ್ಲಿ ಮಾಸಿಕ ರೂ.15000 ರಿಂದ 20000/- ಸಂಬಳವಿದ್ದು, ಕೆಲಸದ ಒತ್ತಡ ಜಾಸ್ತಿ ಇದೆ, ಏನಾದರೂ

Business ಮಾಡಲು ಐಡಿಯಾ ಕೊಡು ಎಂದು ಕೇಳುತ್ತಿದ್ದ. ಅದೇ ಸಮಯಕ್ಕೆ ನಾನು RO Plant Project ನಡೆಸಲು ಸರ್ಕಾರದಿಂದ ಗುತ್ತಿಗೆ ಪಡೆದುಕೊಂಡೆನು. ಆಗಾಗ್ಗೆ ಸರ್ಕಾರಿ ಕಚೇರಿ ಹಾಗೂ ಅಧಿಕಾರಿಗಳನ್ನು ಬೇಟಿ ಮಾಡಲು ಓಡಾಡಲು ಆಗುವುದಿಲ್ಲವೆಂದು ಪಿರ್ಯಾದಿದಾರರನ್ನು ಕೇವಲ Working partner ಆಗಿ ಕರೆದುಕೊಂಡೆ. ಪ್ರಶಾಂತ ಎಂಬುವವರು RO Plant Project ನಡೆಸಲು ಮಾರ್ಗದರ್ಶನ ನೀಡಿರುತ್ತಾರೆ. Infosis ಸಂಸ್ಥೆಗೆ ರಾಜೀನಾಮೆ ನೀಡಿ ಪೂರ್ಣಕಾಲಿಕವಾಗಿ ನಮ್ಮೊಂದಿಗೆ ಪಿರ್ಯಾದಿದಾರರು ಕುಟುಂಬದ ಸದಸ್ಯರಂತೆ ಇದ್ದರು. ಸದರಿ RO ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು. ಈ ಮಧ್ಯ ನನ್ನ ತಂದೆ ಮೌಂಟ್ ಅಬು ಪ್ರವಾಸಕ್ಕೆ ಹೋದಾಗ ಮೃತಪಟ್ಟರು.

3. ತಂದೆ ಮರಣದಿಂದ ನಾನು ವ್ಯವಹಾರಗಳಲ್ಲಿ ಹೆಚ್ಚಿನ ಆಸಕ್ತಿ ಆಗದ ಕಾರಣ RO Plant ವ್ಯವಹಾರವನ್ನು ಸಂಪೂರ್ಣವಾಗಿ ಪಿರ್ಯಾದಿದಾರನಿಗೆ ನೋಡಿಕೊಳ್ಳಲು ಬಿಟ್ಟಿದ್ದೆ. ಹಿರೇಕೆರೂರು ಯುನಿಯನ್ ಬ್ಯಾಂಕನಲ್ಲಿ ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ವೈಯಕ್ತಿಕವಾಗಿ 2 ಖಾತೆಗಳನ್ನು ಹೊಂದಿದ್ದೆ. ವ್ಯವಹಾರದ ಸಂಬಂಧ 2 ಖಾತೆಗಳ ಚೆಕ್ಕು ಪುಸ್ತಕಗಳನ್ನು ಪಿರ್ಯಾದಿದಾರರಿಗೆ ಕೊಟ್ಟು ತುರ್ತು ವಿಷಯಗಳಿಗಾಗಿ ತಲಾ 8 ಚೆಕ್ಕುಗಗಳಿಗೆ ಸಹಿ ಮಾಡಿ ಕೊಟ್ಟಿದ್ದೆ. ವ್ಯವಹಾರ ಚೆನ್ನಾಗಿ ನಡೆಯುತ್ತಿದ್ದರಿಂದ ಪಿರ್ಯಾದಿದಾರರನ್ನು ನಾನು ಸಂಪೂರ್ಣವಾಗಿ ನಂಬಿದ್ದೆ, ಆದರೆ 2016 ರಲ್ಲಿ ಪಿರ್ಯಾದಿದಾರರು RB Enterprises ಹೆಸರಿನಲ್ಲಿ ವ್ಯವಹಾರಿಕ ಸಂಸ್ಥೆಯನ್ನು ಪ್ರಾರಂಭಿಸಿದ ನಂತರ ನನಗೆ ತಿಳಿಸಿದರು. ಸದರಿ ವ್ಯವಹಾರಕ್ಕಾಗಿ ರೂ.30,00,000/- ಕೊಡು ಎಂದು ನನ್ನನ್ನು ಕೇಳಿದರು. ಸಧ್ಯಕ್ಕೆ ನನ್ನ ಬಳಿ ಇರುವುದಿಲ್ಲ. ಗುತ್ತಿಗೆ ಹಣ ಬಂದ ನಂತರ ಕೊಡುವುದಾಗಿ ತಿಳಿಸಿದೆ. 2016 ರಲ್ಲಿ ನನ್ನ ಗುತ್ತಿಗೆ ಕೆಲಸದ ಹಣ ರೂ.18,64,000/- ಬಂದಿದ್ದು, ಸದರಿ ಹಣವನ್ನು ತನ್ನ ವ್ಯವಹಾರಕ್ಕೆ ಬಳಸಿಕೊಳ್ಳಲು ಪಿರ್ಯಾದಿದಾರನಿಗೆ ನನ್ನ ಟ್ರೇಡರ್ಸ ಖಾತೆಯ ಮೂಲಕ ಅವರ RB Enterprises ಖಾತೆಗೆ ವರ್ಗಾಯಿಸಿದೇನು. 2017 ರಲ್ಲಿಯು ರೂ. 5,61,000/- ಗಳನ್ನು ಅದೇ ಖಾತೆಯ ಮೂಲಕ ವರ್ಗಾಯಿಸಿರುತ್ತೇನೆ.

4. ಪಿರ್ಯಾದಿದಾರನು ನನ್ನ ವ್ಯವಹಾರವನ್ನು ನಿರ್ಲಕ್ಷಿಸಿ ತನ್ನ ವ್ಯವಹಾರವನ್ನು ಮುಂದುವರೆಸುತ್ತಿದ್ದ. ನಾನು ನೀಡಿದ ಹಣವನ್ನು ವಾಪಸ್ಸು ಕೊಡುವಂತೆ ಸಾಕಷ್ಟು ಬಾರಿ ಮೌಖಿಕವಾಗಿ, ನೇರವಾಗಿ ಬೇಟಿಯಾಗಿ ಕೇಳಿರುತ್ತೇನೆ. ಅವರು ಆಗ ಈಗ ಕೊಡುತ್ತೇನೆ ಎಂದು ಮುಂದೂಡುತ್ತಾ ಬಂದಿರುತ್ತಾರೆ. ದಿಃ 04-11-2019 ರಂದು ನನ್ನ ಪತ್ನಿ ಹೆರಿಗೆ ಸಂಬಂಧಿತ

ಸಮಸ್ಯೆಯಲ್ಲಿ ಹೆಚ್ಚಿನ ರಕ್ತಸ್ರಾವ ಆಗಿ ತುರ್ತಾಗಿ ಅವರನ್ನು ರಾಣೆಬೆನ್ನೂರಿನ ಸಿಟಿ ಮೆಡಿಕಲ್ ಆಸ್ಪತ್ರೆಯಲ್ಲಿ ದಾಖಲು ಮಾಡಿ ಹೆರಿಗೆ ಆದ ನಂತರ 13 ದಿನಗಳ ಕಾಲ ದಾವಣಗೆರೆಯ ಬಾಪೂಜಿ ಆಸ್ಪತ್ರೆ, ಒಂದು ದಿನ ಎಸ್ ಎಸ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು, ಅಲ್ಲಿಂದ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯಲ್ಲಿ ಸುಮಾರು 2 ವರೆ ತಿಂಗಳುಗಳ ಕಾಲ ICU ನಲ್ಲಿ ಕೋಮಾ ಸ್ಥಿತಿಯಲ್ಲಿ ದಾಖಲಾಗಿದ್ದರು. ಆಸ್ಪತ್ರೆಯ ಖರ್ಚು ಹೆಚ್ಚಾಗಿದ್ದರಿಂದ ನಾನು ಪ್ರತಿದಿನ ಪಿರ್ಯಾದಿದಾರನಿಗೆ ಕರೆ ಮಾಡಿ ನಾನು ಕೊಟ್ಟ ಹಣವನ್ನು ವಾಪಸ್ಸು ಕೊಡುವಂತೆ ಕೇಳುತ್ತಿದ್ದೇನು. ಆದರೆ ಹಣ ವಾಪಸ್ಸು ಕೊಡಲಿಲ್ಲ, ನಮ್ಮ ಇಡೀ ಕುಟುಂಬ ನನ್ನ ಹೆಂಡತಿಯ ಚಿಕಿತ್ಸೆಯಲ್ಲಿ ಮಣಿಪಾಲ್.ನಲ್ಲಿ ನಿರತರಾಗಿದ್ದಾಗ ಪಿರ್ಯಾದಿದಾರರು ನಾನು ಕೊಟ್ಟ ಹಣ, ವ್ಯವಹಾರದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಲ್ಲದೇ ನನ್ನ 2 ಖಾತೆಗೆ ಸಂಬಂಧಿಸಿದ ನಾನು ಸಹಿ ಮಾಡಿ ಇಟ್ಟಿದ್ದ ಚೆಕ್ಕುಗಳಲ್ಲಿ ಕೆಲವನ್ನು ಸ್ವತಃ ಸಹಿ ಮಾಡಿ ಹಣ ನಗದೀಕರಿಸಿಕೊಂಡಿದ್ದು, ಕೆಲವೊಂದು ಚೆಕ್ಕುಗಳನ್ನು ಬ್ಯಾಂಕಿಗೆ ಸಲ್ಲಿಸಿ ಅಮಾನ್ಯ ಮಾಡಿಸಿಕೊಂಡಿರುತ್ತಾರೆ.

5. RO Plant installation ಗಾಗಿ ಸರ್ಕಾರಕ್ಕೆ ರೂ.75,000/- ಗಳ FDR ಹಣವನ್ನು ಜಮಾ ಮಾಡಿದ್ದು, ಪ್ರತಿ ವರ್ಷ ಸದರಿ ಹಣದಲ್ಲಿ ರೂ.25,000/- ಗಳಂತೆ ಬಾಂಡಗಳನ್ನು 3 ಸಾರಿ ನನಗೆ ವಾಪಸ್ಸು ಕೊಡುತ್ತಾರೆ, ಹೀಗೆ ಸುಮಾರು 13 ರಿಂದ 16 Plant ಗಳಿಗೆ FDR ಮಾಡಿಸಿದ್ದೆ. ನನ್ನ ಸಹಿಯನ್ನು ನಕಲು ಮಾಡಿ ಬಾಂಡ್ ಹಣವನ್ನು ಪಿರ್ಯಾದಿದಾರರು ಪಡೆದುಕೊಂಡಿರುತ್ತಾರೆ. ನಾನು ಆಸ್ಪತ್ರೆಯಿಂದ ವಾಪಸ್ಸು ಬಂದು ಹಣವನ್ನು ಹಾಗೂ ಅವರ ಕಡೆ ಕೊಟ್ಟಿದ್ದ ಚೆಕ್ಕು ಬುಕ್ಕುಗಳನ್ನು ವಾಪಸ್ಸು ಕೊಡುವಂತೆ ಕೇಳಿದಾಗಲೂ ಸಹ ಕೊಟ್ಟಿರುವುದಿಲ್ಲ. ಈ ಮಧ್ಯ ಕೊರೋನಾ ಬಂದು ನಾನು 2-3 ಸಾರಿ ಹಣ ಕೇಳಿ ಸುಮ್ಮನಾಗಿದ್ದೆ. ನ್ಯಾಯಾಲಯದಿಂದ ವಾರೆಂಟ್ ಬಂದಾಗಲೇ ಪಿರ್ಯಾದಿದಾರರು ನನಗೆ ಸೇರಿದ ಚೆಕ್ಕುಗಳನ್ನು ದುರುಪಯೋಗ ಮಾಡಿಕೊಂಡಿರುವುದು ಗೊತ್ತಾಯಿತು. ನನಗೆ ಕೊಡಬೇಕಾದ ಹಣವನ್ನು ವಾಪಸ್ಸು ಕೊಡದಂತೆ ತಪ್ಪಿಸಿಕೊಳ್ಳುವ ಸಲುವಾಗಿ ನನ್ನದೆ ಚೆಕ್ಕುಗಳನ್ನು ಬಳಸಿಕೊಂಡು ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ.

6. ನಾನು ಪಿರ್ಯಾದಿದಾರರಿಗೆ ಸಂಬಂಧಿಸಿದಂತೆ ಯಾವುದೇ ಹಣ ಪಡೆದುಕೊಂಡಿರುವುದಿಲ್ಲ ಹಾಗೂ ಉಪಯೋಗಿಸಿರುವುದಿಲ್ಲ. ಪ್ರತಿಯಾಗಿ ಪಿರ್ಯಾದಿದಾರರೆ ನನಗೆ ರೂ. 25,65,000/- ಗಳನ್ನು ಕೊಡಬೇಕಾಗಿರುತ್ತದೆ. ಖಾತೆಯ ಮೂಲಕ ನೀಡಿದ ಹಣ

ಸಿ.ಸಿ. ನಂಃ 82/2020

**ಡಿ.ಡಬ್ಲ್ಯೂಃ 1**

ರೂ.25,65,000/- ಗಳ ಹಣವಾಗಿದ್ದು ಹಾಗೆಯೇ ಸುಮಾರು ಹಣವನ್ನು ಪಿರ್ಯಾದಿದಾರರು ದುರುಪಯೋಗಪಡಿಸಿಕೊಂಡಿರುತ್ತಾರೆ. ಪಿರ್ಯಾದಿ ಹೇಳುವಂತೆ ವ್ಯಾಪಾರದ ಅಭಿವೃದ್ದಿಗಾಗಿ ಯಾವುದೇ ಹಣವನ್ನು ಪಿರ್ಯಾದಾರರಿಂದ ಪಡೆದುಕೊಂಡಿರುವುದಿಲ್ಲ. ಹಾಗೆಯೇ ಅಂತಹ ಯಾವುದೇ ಹಣದ ಮರುಪಾವತಿಗಾಗಿ ನಿಪಿ-1 ಮತ್ತು 2 ರ ಚೆಕ್ಕುಗಳನ್ನು ಪಿರ್ಯಾದಿದಾರರಿಗೆ ನೀಡಿರುವುದಿಲ್ಲ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 04-02-2026

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು